

# ಸಾಗರದೊಳಗಿನ ತಾರೆ

■ ಪ್ರವೀಣ ಕುಲಕರ್ಣಿ

ಕಳೆದ ಶತಮಾನದಲ್ಲಿ ಜಗತ್ತಿನ ಅತಿದೊಡ್ಡ ಮಹಿಳಾ ಸೆಲೆಬ್ರಿಟಿ ಯಾರಿದ್ದಿರಬಹುದು? ಈ ಪ್ರಶ್ನೆಗೆ ಸಿಗುವ ಬೆರಳೆಣಿಕೆಯ ಉತ್ತರಗಳಲ್ಲಿ ಎಮೆಲಿ ಇಯರ್‌ಹಾರ್ಟ್ ಅವರದೂ ಒಂದು. ಅವರ ಕನಸುಗಳಿಗೆ ಗಗನವೇ ಮಿತಿಯಾಗಿತ್ತು. ಅಂದಹಾಗೆ, 19ನೇ ಶತಮಾನದ ಮೊದಲಾರ್ಧದಲ್ಲೇ ವಿಮಾನದಲ್ಲಿ ಹಾರಾಡುತ್ತಾ ದೇಶ, ದೇಶ, ಖಂಡ, ಖಂಡ ಸುತ್ತಿದವರು ಅವರು. ಅಮೆರಿಕದ ಮೊದಲ ಮಹಿಳಾ ಪೈಲಟ್ ಎಂಬ ಶ್ರೇಯ ಕೂಡ ಅವರದಾಗಿದೆ. ಪೆಸಿಫಿಕ್ ಮಹಾಸಾಗರದಲ್ಲಿ ಸೋಲೊ ಗಗನಯಾತ್ರೆ ಕೈಗೊಂಡಿದ್ದ ಅವರು, ವಿಮಾನಸಹಿತ ಅದೃಶ್ಯರಾಗಿದ್ದರು. ಅದು 1937ರ ಜುಲೈ ತಿಂಗಳಿನಲ್ಲಿ. ಎಮೆಲಿ ಅವರು ಹಾಗೆ ಅದೃಶ್ಯರಾಗಿ ಹೆಚ್ಚು ಕಡಿಮೆ ತೊಂಬತ್ತು ವರ್ಷಗಳಾಗಿವೆ. ಇದೀಗ ಕೆಲವರು ಪೆಸಿಫಿಕ್ ಮಹಾಸಾಗರದಲ್ಲಿ ಎಮೆಲಿ ಅವರ ವಿಮಾನದ ಅವಶೇಷಗಳನ್ನು ಪತ್ತೆ ಮಾಡಿರುವುದಾಗಿ ಹೇಳಿಕೊಂಡಿದ್ದಾರೆ. ಹೀಗಾಗಿ ಗಗನದಲ್ಲಿ ಅಪರಿಮಿತವಾಗಿ ಹಾರಾಡಿದ್ದ ಆ ಸೆಲೆಬ್ರಿಟಿ ಈಗ ಮತ್ತೆ ಮುನ್ನೆಲೆಗೆ ಬಂದಿದ್ದಾರೆ.

ಎಮೆಲಿ ಅವರು 1930ರ ದಶಕದಲ್ಲೇ ವಿಮಾನದಲ್ಲಿ ಸೋಲೊ ಯಾನದ ಮೂಲಕ ಜಗತ್ತನ್ನು ಸುತ್ತಿದ್ದರು. ಸಪ್ತಸಾಗರಗಳನ್ನು ವಿಮಾನದಲ್ಲಿ ಸುತ್ತು ಹಾಕಿದ ಶ್ರೇಯ ಅವರದು. ಅಮೆರಿಕದ ಸಾಂಸ್ಕೃತಿಕ ನಾಯಕಿಯಾಗಿಯೂ ಗುರ್ತಿಸಿಕೊಂಡ ಅವರು, ವಾಣಿಜ್ಯ ವಿಮಾನಯಾನವನ್ನು ಉತ್ತೇಜಿಸಿದವರು. ತಮ್ಮ ವಿಮಾನಯಾನದ ಅನುಭವಗಳನ್ನು ಕೃತಿಯಾಗಿ ಬರೆದವರು. ಅವರ ಹಲವು ಕೃತಿಗಳು ಆ ಕಾಲದಲ್ಲೇ ಬಿಸಿ ಮಸಾಲೆ ದೋಸೆಯಂತೆ ಖರ್ಚಾಗುತ್ತಿದ್ದವಂತೆ. ಮಹಿಳಾ ಪೈಲಟ್‌ಗಳ ಸಂಘಟನೆ ‘ನೈಂಟಿ ನೈನ್ಸ್’ ಅನ್ನು ಕಟ್ಟಿ ಬೆಳೆಸಿದವರು ಕೂಡ ಅವರೇ.

ಸಾಹಸ ಪ್ರವೃತ್ತಿಯ ಎಮೆಲಿ, ಒಮ್ಮೆ ಕೆನಡಾದಲ್ಲಿ ಏರ್ ಶೋವೊಂದಕ್ಕೆ ಹೋಗಿದ್ದರು. ಮೊದಲ ನೋಟದಲ್ಲೇ ವಿಮಾನದ ಮೇಲೆ ಅವರಿಗೆ ಪ್ರೇಮಾಂಕುರವಾಯಿತು. ಅಲ್ಲಿಂದ ಮುಂದೆ ಅವರು ಬದುಕಿನುದ್ದಕ್ಕೂ ಧೇನಿಸಿದ್ದು ವಿಮಾನವೊಂದನ್ನೇ. ಅಮೆರಿಕದ ಪ್ರತಿಷ್ಠಿತ ಫ್ಲೈಯಿಂಗ್ ಕ್ರಾಸ್ ಪ್ರಶಸ್ತಿಯನ್ನೂ ಪಡೆದಿರುವ ಅವರು, ಹಲವು ವಿಶ್ವವಿದ್ಯಾಲಯಗಳಿಗೆ ಏರೋನಾಟಿಕಲ್ ಎಂಜಿನಿಯರಿಂಗ್ ವಿಭಾಗದ ವಿಸಿಟಿಂಗ್ ಪ್ರೊಫೆಸರ್ ಆಗಿಯೂ ಕಾರ್ಯ ನಿರ್ವಹಿಸಿದವರು. ವಿದ್ಯಾರ್ಥಿನಿಯರನ್ನು ಏರೋನಾಟಿಕಲ್ ಎಂಜಿನಿಯರಿಂಗ್ ಕೋರ್ಸ್ ತೆಗೆದುಕೊಂಡು, ಅಧ್ಯಯನ ನಡೆಸುವಂತೆ ಉತ್ತೇಜಿಸಿದವರು. ಸಮಾನ ಹಕ್ಕುಗಳಿಗಾಗಿ ಬದುಕಿನ ಉದ್ದಕ್ಕೂ ಧ್ವನಿ ಎತ್ತಿದ ಅವರು, ರಾಷ್ಟ್ರೀಯ ಮಹಿಳಾ ಪಕ್ಷದ ಸದಸ್ಯೆಯೂ ಆಗಿದ್ದರು. 1920 ಹಾಗೂ 30ರ ದಶಕದಲ್ಲಿ ಅಮೆರಿಕ, ಅಷ್ಟೇ ಏಕೆ, ಜಗತ್ತಿನ ಹಲವು ದೇಶಗಳಲ್ಲಿ ಅವರು ಪ್ರಭಾವಿ ಮಹಿಳೆ ಎನಿಸಿದ್ದರು.

1937ರಲ್ಲಿ ಪೆಸಿಫಿಕ್ ಮಹಾಸಾಗರವನ್ನು ಸುತ್ತುವ ಅಭಿಲಾಷೆ ಹೊತ್ತು ‘10–ಇ ಎಲೆಕ್ಟ್ರಾ’ ವಿಮಾನದಲ್ಲಿ ಹೊರಟ ಅವರು ಹಾಲೆಂಡ್ ದ್ವೀಪದ ಬಳಿ ಸಾಗರದಲ್ಲಿ ಅದೃಶ್ಯರಾಗಿದ್ದರು. ವಿಮಾನದ ಇಂಧನ ಖಾಲಿಯಾಗಿ ಪತನಗೊಂಡಿದ್ದರಿಂದ ಅವರು ಸಾವನ್ನಪ್ಪಿದರು ಎಂದು ನಂಬಲಾಗಿದೆ. ಎಮೆಲಿ ಅವರ ವಿಮಾನ ಪತನಗೊಂಡ ಬಳಿಕ ಒಂದೂವರೆ ವರ್ಷದವರೆಗೆ ವಿಮಾನದ ಅವಶೇಷ ಹಾಗೂ ಅವರನ್ನು ಪತ್ತೆ ಮಾಡಲು ಭಾರಿ ಹರಸಾಹಸ ನಡೆಸಲಾಯಿತು. ಕೊನೆಗೆ ಏನೂ ಸುಳಿವು ಸಿಗದೆ ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು. ಥಳುಕಿನ ಜೀವನ, ವರ್ಣರಂಜಿತ ಚರಿಷ್ಮಾದಿಂದ ಅಮೆರಿಕದ ಕಣ್ಮಣಿ ಎನಿಸಿದ್ದ ಎಮೆಲಿ ಅವರ ಸಾವು, ಆ ದೇಶಕ್ಕೆ ಗರ ಬಡಿಯುವಂತೆ ಮಾಡಿತ್ತು. ಸಾರ್ವಜನಿಕ ವಲಯದಲ್ಲಿ ನೂರಾರು ಕೌತುಕದ ಕಥೆಗಳು ಅವರ ಸಾವಿನ ಸುತ್ತ ಹುಟ್ಟಿಕೊಂಡಿದ್ದವು. ಎಮೆಲಿ ಅವರ ಸ್ಮರಣಾರ್ಥ ಅಮೆರಿಕ ಹಲವು ಉಪಕ್ರಮಗಳನ್ನು ಕೈಗೊಂಡಿದೆ. ಅಮೆರಿಕ ಏರ್‌ಮೇಲ್ ಸ್ಟ್ಯಾಂಪ್‌ನಲ್ಲಿ ಅವರ ಚಿತ್ರವಿದೆ. ಅವರ ಹೆಸರಿನಲ್ಲೊಂದು ವಿಮಾನ ನಿಲ್ದಾಣ ನಿರ್ಮಿಸಲಾಗಿದೆ. ಮ್ಯೂಸಿಯಂ ಸ್ಥಾಪಿಸಲಾಗಿದೆ. ಸೇತುವೆ, ಗ್ರಂಥಾಲಯಗಳನ್ನೂ ನಿರ್ಮಿಸಲಾಗಿದೆ. ನೂರಾರು ಸಾಕ್ಷ್ಯಚಿತ್ರಗಳು, ಸಿನಿಮಾಗಳು, ಪುಸ್ತಕಗಳು ಕೂಡ ಬಂದಿವೆ. ವಿಮಾನಯಾನದ ಹೀರೊಗಳ ಪಟ್ಟಿಯಲ್ಲಿ ಅವರಿಗೆ ಒಂಬತ್ತನೇ ಸ್ಥಾನ ನೀಡಲಾಗಿದೆ.

ನ್ಯಾಯಾಧೀಶರ ಮೊಮ್ಮಗಳಾದ ಎಮೆಲಿ ಬಾಲ್ಯದಿಂದಲೂ ಚೂಟಿಯಾಗಿದ್ದರಂತೆ. ನರ್ಸಿಂಗ್ ಶಿಕ್ಷಣ ಪಡೆದಿದ್ದ ಅವರು, ರೋಗಿಗಳ ಆರೈಕೆಯಲ್ಲೂ ಮಾತೃಹೃದಯಿಯಾಗಿದ್ದರು ಎಂದು ಚರಿತ್ರೆಯಲ್ಲಿ ದಾಖಲಾಗಿದೆ. ಮಿಲಿಟರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ ಅವರು, ಗಾಯಗೊಂಡ ಪೈಲಟ್‌ಗಳಿಗೂ ಉಪಚಾರ ಮಾಡುತ್ತಿದ್ದರಂತೆ. ಆ ಸಂದರ್ಭದಲ್ಲೇ ವಿಮಾನಯಾನದ ಕುರಿತು ಆಸಕ್ತಿ ಗರಿಗೆದರಿತ್ತು ಎಂದು ಅವರೊಂದು ಕಡೆ ಬರೆದುಕೊಂಡಿದ್ದಾರೆ. ತಮ್ಮ ಮೊದಲ ವಿಮಾನಯಾನದ ಅನುಭವವನ್ನು ಅವರು ಒಂದು ಫೆಂಟಸಿ ಕಥೆಯಂತೆ ಚಿತ್ರಿಸಿದ್ದಾರೆ. ಜಗತ್ತಿನ ವಿಮಾನಪ್ರಿಯರ ಕಣ್ಮಣಿಯಾದ ಈ ತಾರೆ ಕಾಣೆಯಾಗಿ ಒಂಬತ್ತು ದಶಕಗಳು ಸಂದುಹೋಗಿದ್ದರೂ ಮತ್ತೆ ಬೆಳಗುತ್ತಿದ್ದಾರೆ. ವಿಮಾನದ ಅವಶೇಷ ಪತ್ತೆಯಾದ ಈ ಸಂದರ್ಭದಲ್ಲಿ ಇತಿಹಾಸಪ್ರಿಯರ ಮನದಂಗಳದಲ್ಲಿ ಮತ್ತೆ ಮೆರವಣಿಗೆ ಹೊರಟಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65